ದಯಮಾಡಿ, ಕುಳಿತುಕೊಳ್ಳಿ ನೀವು ಎದ್ದು ನಿಂತು ಹೇಳಿದರೆ ನಾನು ಹೇಗೆ ಹೇಳಲಿ?

ಶ್ರೀ ಎ ಎಸ್ ಪಾಟೀಲ್ ನಡಹಳ್ಳಿ: ಉತ್ತರದಲ್ಲಿ ಕನಿಷ್ಠ ಬಲಪ್ರಯೋಗ ಎಂದು ಕೊಟ್ಟಿದ್ದಾರೆ. ಅದರ, ಪತ್ರಿಕೆಗಳಲ್ಲಿ ಮತ್ತು ಟಿ.ವಿ.ಮಾಧ್ಯಮಗಳಲ್ಲಿ ನೋಡಿದಾಗ ನಮಗೆಷ್ಟು ನೋವು ಎನ್ನಿಸುತ್ತದೆ ಎಂದರೆ, ಮೂರು ನಾಲ್ಕು ಜನ ಪೊಲೀಸರು ಒಬ್ಬ ರೈತರನ್ನು ಹಿಡಿದುಕೊಂಡು ಹೋಗುವ ರೀತಿ ನೋಡಿದರೆ ಬಹಳ ನೋವಾಗುತ್ತದೆ. ಇದನ್ನು ಸರ್ಕಾರ ಕನಿಷ್ಠ ಬಲಪ್ರಯೋಗ ಎಂದು ಹೇಳಿದರೆ ಹೇಗೆ?

ಅಧ್ಯಕ್ಷರು: ನೀವು ಶೂನ್ಯವೇಳೆಯಲ್ಲಿ ಈ ರೀತಿಯಾಗಿ ಚರ್ಚೆಸಿದರೆ ನಾನು ಅವಕಾಶ ಕೊಡುವುದಿಲ್ಲ. ದಯಮಾಡಿ ನೀವಿ ಬೇರೆ ರೂಪದಲ್ಲಿ ತನ್ನಿ. ರೇವಣ್ಣನವರೆ ತಾವು ಮೆನ್‌ಷನ್ ಮಾಡಿ.

ಶ್ರೀ ಎ ಎಸ್ ಪಾಟೀಲ್ ನಡಹಳ್ಳಿ: ದೌರ್ಜನ್ಯ ಮಾಡಿರುವ ಅಧಿಕಾರಿಗಳಿಗೆ ಶಿಕ್ಷೆಯಾಗಬೇಕು ಅವರ ಮೇಲೆ ಕ್ರಮ ಕೈಗೊಳ್ಳಬೇಕು ಅವರನ್ನು ಸಸ್ಪೆಂಡ್ ಮಾಡುವ ಕೆಲಸ ಸರ್ಕಾರ ಮಾಡಬೇಕೆಂದು ನಾನು ಆಗ್ರಹಿಸುತ್ತೇನೆ.

ಶ್ರೀ ಗೋವಿಂದ ಎಂ ಕಾರಜೋಳ: ರೇವಣ್ಣನವರ ಆಸ್ಥಾನದಲ್ಲಿ ಬಿಜಾಪುರದ ಎ.ಎಸ್.ಪಾಟೀಲ್ ರವರು ಹೇಗೆ ಬಂದರು?

ಶ್ರೀ ಹೆಚ್ ಡಿ ರೇವಣ್ಣ: ಮಾನ್ಯ ಕಾರಜೋಳ್‌ರವರೆ, ಈ ಬಗ್ಗೆ ವಿಶೇಷವಾಗಿ ನಿಲುವಳಿ ಸೂಚನೆ ತರುತ್ತೇವೆ ಅದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಗೋವಿಂದ ಎಂ ಕಾರಜೋಳ: ಅವರು ಬರಬಾರದು ಅಲ್ಲವೆ ಅವರು ಹೇಗೆ ಬಂದರು?

ಆ) ವಿಷಯ: ರಾಜ್ಯದಲ್ಲಿ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಹಿಂದುಳಿದ ವರ್ಗಗಳ ವಸತಿ ಶಾಲೆಗಳ ಕಟ್ಟಡ ನಿರ್ಮಾಣಕ್ಕಾಗಿ ಸಮಾಜ ಕಲ್ಯಾಣ ಇಲಾಖೆ ಟೆಂಡರ್ ಕರೆಯದೇ ಪ್ಯಾಕೇಜ್ ಮೂಲಕ ನೀಡಿರುವ ಬಗ್ಗೆ.

ಶ್ರೀ ಹೆಚ್ ಡಿ ರೇವಣ್ಣ (ಹೊಳೇನರಸಿಪುರ): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚಿನ್ನಮ್ಮ ಮತ್ತು ಹಿಂದುಳಿದ ವರ್ಗಗಳ ಹಾಗೂ ಇತರೆ ವರ್ಗಗಳ ಒಟ್ಟು 20 ವಸತಿ ಶಾಲೆಗಳ ಕಟ್ಟಡಗಳ

ನಿರ್ಮಾಣಕ್ಕಾಗಿ ಸಮಾಜ ಕಲ್ಯಾಣ ಇಲಾಖೆ ಕಳೆದ 3 ತಿಂಗಳಿನಿಂದ ಟೆಂಡಟ್ ಕರೆಯದೇ ಈ ಎಲ್ಲಾ ಕಾಮಗಾರಿಗಳನ್ನು ಬೃಹತ್ ಪ್ಯಾಕೇಜ್ ಮಾಡಿ ಈ ಕಾಮಗಾರಿಗಳನ್ನು ಒಬ್ಬನೇ ಗುತ್ತಿಗೆದಾರನಿಗೆ ಕೊಡಬೇಕೆಂಬ ಉದ್ದೇಶ ಮತ್ತು ಹಿನ್ನಲೆಯಲ್ಲಿ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳದೇ ಇರುವುದರಿಂದ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಹಿಂದುಳಿದ ವರ್ಗಗಳ ಹಾಗೂ ಇತರೆ ವರ್ಗಗಳ ವಸತಿ ಶಾಲೆಯ ಮಕ್ಕಳು ಬೀದಿಯಲ್ಲಿ ಪಾಠ ಪ್ರವಚನ ಕಲಿಯುವ ಪರಿಸ್ಥಿತಿ ಉಂಟಾಗಿದ್ದು ಇದನ್ನು ಕೂಡಲೇ ಟೆಂಡರ್ ಕರೆದು ಒಂದೊಂದು ಐಟಂಗಳನ್ನು ಸಪರೇಟಾಗಿ ಟೆಂಡರ್ ಕರೆದು ನೂರು ಕೋಟಿ ರೂಪಾಯಿ ಟೆಂಡರ್‌ನ್ನು ಒಟ್ಟಿಗೆ ಕರೆಯುವುದು ಬೇಡ, 22 ಕೋಟಿ ರೂಪಾಯಿಯ ಟೆಂಡರ್‌ನ್ನು ಸಪರೇಟಾಗಿ ಕರೆಯಿರಿ, ಏಕೆಂದರೆ ನೂರು ಕೋಟಿ ರೂಪಾಯಿಯ ಟೆಂಡರ್ ಒಬ್ಬ ಕಂಟ್ರಾಕ್ಟರ್‌ರವರಿಗೆ ಕೊಟ್ಟರೆ ಅವನು ಐದು ವರ್ಷವಾಗುವುದು ಬೇಡ, ಅದಕ್ಕಾಗಿ individual ಆಗಿ ಕರೆಯಿರಿ ಎಂದು ನಾನು ಶೂನ್ಯವೇಳೆಯಲ್ಲಿ ಮಾನ್ಯ ಸಮಾಜ ಕಲ್ಯಾಣ ಸಚಿವರಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಶ್ರೀ ಡಿ ಸುಧಾಕರ್ (ಸಮಾಜ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ,

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ರಾಜ್ಯದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಮತ್ತು ಪದವಿ ಪೂರ್ವ ವಸತಿ ಕಾಲೇಜುಗಳ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಂಡಿದೆ. 2009–10ನೇ ಸಾಲಿನವರೆಗೆ 115 ಕಟ್ಟಡ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಇನ್ನೂ 116 ವಸತಿ ಶಾಲೆಗಳ ಕಟ್ಟಡ ಕಾಮಗಾರಿಗಳ ನಿರ್ಮಾಣ ಹಂತದಲ್ಲಿವೆ.

ಈ ಶಾಲಾ ಕಟ್ಟಡ ಕಾಮಗಾರಿಗಳನ್ನು "ಕರ್ನಾಟಕ ಪಾರದರ್ಶಕತೆ ಮತ್ತು ಸಾರ್ವಜನಿಕ ಸಂಗ್ರಹಣೆಗಳ ಕಾಯಿದೆ" ನಿಯಾಮಾನುಸಾರ e-procurement ಫ್ಲಾಟ್ ಫಾರಂ ನಲ್ಲಿ ಇ-ಟೆಂಡರ್ ಕರೆಯಲಾಗುತ್ತಿದೆ. ಪ್ರತಿ ಶಾಲಾ ಕಟ್ಟಡದ ಅಂದಾಜು ಮೊತ್ತ ಸುಮಾರು ರೂ.4.75 ಕೋಟಿ ಆಗಿರುತ್ತದೆ.

ಆದ್ದರಿಂದ 2009–10ನೇ ಸಾಲಿನಲ್ಲಿ ಒಟ್ಟು 19 ಕಾಮಗಾರಿಗಳನ್ನು (ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗಕ್ಕೆ ಸೇರಿದ) ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು 4–5 ಕಾಮಗಾರಿಗಳನ್ನು ಒಂದು ಪ್ಯಾಕೇಜ್ ಮಾಡಿ ಟೆಂಡರ್ ಕರೆಯಲು ಉದ್ದೇಶಿಸಿದೆ. ಪ್ರತಿ ಪ್ಯಾಕೇಜಿನ ಮೊತ್ತ ರೂ. 15–20 ಕೋಟಿಗಳಾಗುತ್ತವೆ. ಅದರೆ, ಈ ಸಂಘಕ್ಕೆ ಪ್ರತಿ ಕಾಮಗಾರಿಗೆ ರೂ.5.00 ಕೋಟಿ ಗಳವರೆಗೆ ಮಾತ್ರ ಆಡಳಿತಾತ್ಮಕ ಅನುಮೋದನೆ ನೀಡಲು ಅಧಿಕಾರವಿದ್ದು ಅದಕ್ಕಿಂತ ಹೆಚ್ಚು ಮೊತ್ತದ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಪಡೆಯಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಟೆಂಡರ್ ಮೂಲಕ ಕೆಲಸ ಪಡೆಯುವ ಅನೇಕ ಗುತ್ತಿಗೆದಾರರು ಮೊದಲನೇ ದರ್ಜೆ ಗುತ್ತಿಗೆದಾರರಾಗಿದ್ದರೂ ಸಹ ಕೆಲವು ಕಾಮಗಾರಿಗಳನ್ನು ನಿರ್ಧಿಷ್ಠ ಅವಧಿಯೊಳಗೆ ಪೂರ್ಣಗೊಳಿಸುತ್ತಿಲ್ಲ. ಆದ್ದರಿಂದ, ಕಾಮಗಾರಿಗಳನ್ನು ಪ್ಯಾಕೇಜ್ ಮಾಡಿದ್ದಲ್ಲಿ ಒಳ್ಳೆಯ ಆರ್ಥಿಕ ದೃಡತೆ ಇರುವ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿ ಕಾಮಗಾರಿಗಳನ್ನು ಗುಣಮಟ್ಟದ ರೀತಿಯಲ್ಲಿ ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸುವ ಉದ್ದೇಶದಿಂದ ಪ್ಯಾಕೇಜ್ ಮಾಡಲಾಗುತ್ತಿದೆ. ಆದ್ದರಿಂದ, ಹಾಸನ ಜಿಲ್ಲೆಯಲ್ಲಿ ಬಾಕಿ ಇರುವ 3 ಶಾಲೆಗಳನ್ನು ಸೇರಿಸಿ ಪ್ಯಾಕೇಜ್ ಟೆಂಡರ್ ಕರೆಯುವ ಮುಖಾಂತರ ಶೀಘ್ರದಲ್ಲಿ ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಸರ್ಕಾರವು ಸ್ವಂತ ಕಟ್ಟಡ ಇಲ್ಲದೆ ವಸತಿ ಶಾಲೆಗಳನ್ನು ಬಾಡಿಗೆಗೆ ಪಡೆದ ಕಟ್ಟಡಗಳಲ್ಲಿ ಸಧ್ಯಕ್ಕೆ ನಡೆಸಲಾಗುತ್ತಿದೆ. ಬೀದಿಯಲ್ಲಿ ಪಾಠ ಪ್ರವಚನಗಳನ್ನು ಕಲಿಯುವ ಪರಿಸ್ಥಿತಿಯು ಇಲ್ಲ ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ಸೌಲಭ್ಯ ಒದಗಿಸಲಾಗುತ್ತಿದೆ.

(ಗೊಂದಲ)

ನಾನು ಉತ್ತರ ಕೊಡುತ್ತೇನೆ ಸ್ವಲ್ಪ ತಾಳಿ, 5 ಕೋಟಿಗೆ ಮಾತ್ರ ಆಡಳಿತಾತ್ಮಕ ಅನುಮೋದನೆ ನೀಡಲು ಅಧಿಕಾರವಿರುವುದರಿಂದ, ಅನುಮೋದನೆ ಪಡೆಯುವುದಕ್ಕೆ ಈಗಾಗಲೇ ಹಣಕಾಸು ಇಲಾಖೆಯಿಂದ ಅನುಮತಿಯನ್ನು ಪಡೆಯುತ್ತಿದ್ದೇವೆ. ಈ ರೀತಿ ಮಾಡಲಿಕ್ಕೆ ಏನು ಕಾರಣ ಎಂದರೆ, ರಾಜ್ಯದಲ್ಲಿ

ಅನೇಕ ಕಡೆ ಗುತ್ತಿಗೆದಾರರು ನಮ್ಮ ಸಮಯಕ್ಕೆ ಸರಿಯಾಗಿ ಲೋಕಲ್‌ನಲ್ಲಿರತಕ್ಕ ಕಾಮಗಾರಿಗಳನ್ನು ತೆಗೆದುಕೊಂಡು ನಮ್ಮ ಅವಧಿಯೊಳಗೆ ಈ ಒಂದು ಕೆಲಸ ಪೂರ್ಣ ಮಾಡಿಕೊಡುತ್ತಿಲ್ಲ. ಬಹಳ ಸಾರಿ ಭೇಟಿ ಕೊಟ್ಟು ನೋಡಿದಾಗ ಇದು ಕಳಪೆ ಮಟ್ಟದ್ದಾಗುತ್ತದೆ ಎನ್ನುವ ಭಯದಿಂದ ಸ್ವಲ್ಪ ಆರ್ಥಿಕವಾಗಿ ಧೃಡತೆಯಿರತಕ್ಕಂಥ ಗುತ್ತಿಗೆದಾರರನ್ನು ಹಿಡಿದು ಪ್ಯಾಕೆಜ್ ಮಾಡಿ ಅವಧಿಯೊಳಗೆ ಮುಗಿಸಲಿಕ್ಕೆ ಒಂದು ಪ್ರಯತ್ನ ಸರ್ಕಾರ ಮಾಡುತ್ತಿದೆ ಎಂದು ಹೇಳುವುದರ ಜೊತೆಗೆ ಮಾನ್ಯ ರೇವಣ್ಣನವರೇನು ಕೇಳಿದ್ದಾರೆ ಅದನ್ನು ಸಹ ಇನ್ನೊಂದು 15 ದಿವಸದೊಳಗೆ ಟೆಂಡರ್ ಕರೆಯುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್ ಡಿ ರೇವಣ್ಣ: ಮಕ್ಕಳು ಬೀದಿಪಾಲಾಗಿದ್ದಾರೆ.

(ಗೊಂದಲ)

ಅಧ್ಯಕ್ಷರು: ಕ್ಲಾರಿಫಿಕೇಷನ್‌ಗೆ ಎಲ್ಲಿ ಅವಕಾಶವಿದೆ? ನೀವು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿ ನಂತರ ಕ್ಲಾರಿಫೀಕೇಷನ್ ಕೇಳಿದರೆ ಹೇಗೆ? ನೀವು ಬೇರೆ ರೂಪದಲಿ ತನ್ನಿ.

(ಗೊಂದಲ)

ಶ್ರೀ ಹೆಚ್ ಡಿ ರೇವಣ್ಣ: ಅವರಿಗೆ 5 ಕೋಟಿಯವರೆಗೆ ಪವರ್ಸ್ ಇದೆ. ಟೆಂಡರ್ ಕರೆಯುವುದಕ್ಕೆ ಏನು ತೊಂದರೆ? ಒಬ್ಬರಿಗೇ ಟೆಂಡರ್ ಏಕೆ ಕೊಡುತ್ತೀರಿ? ಏಕೆ individual ಆಗಿ ಕರೆಯುವುದಿಲ್ಲ. ಹೀಗೆ ಮಾಡಿದರೆ ನಾನು ಈ ಬಗ್ಗೆ ಪ್ರತಿಭಟಿಸಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು: ತಾವು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿ ಕ್ಲಾರಿಫೀಕೇಷನ್ ಕೇಳಿಕೊಂಡು ಕುಳಿತರೆ ಆಗುವುದಿಲ್ಲ. ಬೇರೆ ರೂಪದಲ್ಲಿ ತನ್ನಿ.

(ಗೊಂದಲ)

ಶ್ರೀ ಎಂ ಟಿ ಕೃಷ್ಣಪ್ಪ: ಏಕೆ ಒಬ್ಬರಿಗೆ ಕೊಡುತ್ತೀರಿ? ಸಪರೇಟಾಗಿ ಕರೆದು ಕೊಡಿ.

ಅಧ್ಯಕ್ಷರು: ಆಯಿತು ಬಿಡಿ, ಬೇರೆ ರೂಪದಲ್ಲಿ ತಂದು ಚರ್ಚೆ ಮಾಡಿ.

ಶ್ರೀ ಹೆಚ್ ಡಿ ರೇವಣ್ಣ : ದಯಾಮಾಡಿ ಮಾನ್ಯ ಸಚಿವರಿಂದ ಸರಿಯಾದ ರೀತಿಯಲಿ ಉತ್ತರ ಕೊಡಿಸಬೇಕು. ಇಲ್ಲದಿದ್ದಲ್ಲಿ ನಾವು ಪ್ರತಿಭಟಿಸಬೇಕಾಗುತ್ತದೆ.

ಅಧ್ಯಕ್ಷರು: ನೀವು ಒಂದು ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ಮೇಲೆ ಅವರು ಉತ್ತರ ಕೊಟ್ಟಿದ್ದಾರೆ. ಕ್ಲಾರಿಫಿಕೇಷನ್‌ಗೆ ಎಲ್ಲಿ ಅವಕಾಶವಿದೆ? ನೀವು ಬೇರೆ ರೂಪದಲ್ಲಿ ತನ್ನಿ.

ಶ್ರೀ ಹೆಚ್ ಡಿ ರೇವಣ್ಣ: ಸಪರೇಟಾಗಿ ಕರೆಯುವುದನ್ನು ಬಿಟ್ಟು ಯಾರೋ ಒಬ್ಬ ಕಂಟ್ರಾಕ್ಟ್ ರವರಿಗೆ ಕೊಡುವುದಕ್ಕೆ ಹೋದರೆ ಹೇಗೆ? ನಾವು ಇದನ್ನು ಪ್ರತಿಭಟಿಸುತ್ತೇನೆ.

ಅಧ್ಯಕ್ಷರು: ಹಾಗಾದರೆ ನಿಯಮ ಏಕೆ ಇರುವುದು? ನೀವು ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ತರಬಾರದಾಗಿತ್ತು ನೀವು ಬೇರೆ ರೂಪದಲ್ಲಿ ತರಬೇಕಾಗಿತ್ತು.

ಶ್ರೀ ಹೆಚ್ ಡಿ ರೇವಣ್ಣ: ಸಪರೇಟಾಗಿ ಚರ್ಚೆ ಮಾಡುವುದಕ್ಕೆ ನಾಳೆ ಬೆಳಗ್ಗೆ ನಿಯಮ 69ರಲ್ಲಿ ತರುತ್ತೇನೆ. ತಾವು ದಯಮಾಡಿ ಅವಕಾಶ ಕೊಡಬೇಕು ಸ್ವಾಮಿ.

ಅಧ್ಯಕ್ಷರು: ತಾವು ಶೂನ್ಯವೇಳೆಯಲ್ಲಿ ತಂದು ಚರ್ಚೆಗೆ ಅವಕಾಶ ಕೊಡಿ ಎಂದರೆ ಹೇಗೆ? ತಾವು ಸೀನಯರ್ ಸದಸ್ಯರಾಗಿ ಈ ರೀತಿ ಕೇಳಿದರೆ ಸದನ ನಡೆಸುವುದು ಹೇಗೆ?

ಶ್ರೀ ಹೆಚ್ ಡಿ ರೇವಣ್ಣ: ನಾಳೆ ಬೆಳಗ್ಗೆ ನಿಯಮ 69ರಲ್ಲಿ ನೋಟಿಸ್ ಕೊಡುತ್ತೇನೆ ದಯಮಾಡಿ ಈ ಬಗ್ಗೆ ಚರ್ಚೆಗೆ ಅವಕಾಶ ಮಾಡಿ ಕೊಡಬೇಕು.

ಅಧ್ಯಕ್ಷರು: ಸರಿ ನೀವು ಬೇರೆ ರೂಪದಲ್ಲಿ ತನ್ನಿ ಅವಕಾಶ ಕೊಡುತ್ತೇನೆ.

ಶ್ರೀ ಹೆಚ್ ಡಿ ರೇವಣ್ಣ: ಇದು ಮಕ್ಕಳಿಗೆ ಸಂಬಂಧಪಟ್ಟದ್ದಾಗಿದೆ, ಒಂದು ಕಡೆ ಅಲ್ಲ ಇಡೀ ರಾಜ್ಯದಲ್ಲಿ ಈ ಸಮಸ್ಯೆಯಿದೆ, ಹೀಗಾಗಿ ನಾಳೆ ದಯಮಾಡಿ ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಆಯಿತು ಬೇರೆ ರೂಪದಲ್ಲಿ ತನ್ನಿ ಅವಕಾಶ ಕೊಡುತ್ತೇನೆ.

(ಗೊಂದಲ)